ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ ನಂ. **34/2021** ಸಿ.ಡಬ್ಲ್ಯೂ -07

ಪಿ.ಡಬ್ಲ್ಯೂ -04

| | | |
|---|---|---|
| ಹೆಸರು | ಃ | ಡಾಃ ನಾಜೀಮಾ |
| ತಂದೆಃಗಂಡ | ಃ | ಅಬ್ದುಲ ಹಮೀದ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ಇ ಎನ ಟಿ ತಜ್ಞರು, ಜಿಲ್ಲಾ ಆಸ್ಪತ್ರೆ, ಆಳಂದ |
| ವಾಸಸ್ಥಳ | ಃ | ಆಳಂದ |

ದಿನಾಂಕಃ05.02.2024

ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ನಾನು ಸೆಪ್ಟೆಂಬರ 2018 ರಿಂದ ಇಲಿಲಯವರೆಗೆ ಆಳಂದ ಸರ್ಕಾರಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಚಾಸಾ-1 ರವರು ಅವರ ಗಂಡನೊಂದಿಗೆ ಬಂದಿದ್ದರು. ಚಾಸಾ-1 ರವರು ಹೊಡೆದಾಟದ ಹಿನ್ನಲೆಯಲ್ಲಿ ಕ್ವಾರಂಟೈನ ಕರ್ತವ್ಯದಲ್ಲಿದ್ದಾಗ ಗಾಯಗಳು ಆಗಿವೆ ಎಂದು ಆಸ್ಪತ್ರೆಗೆ ಬಂದಿದ್ದರು. ಚಾಸಾ-1 ರವರನ್ನು ಆಳಂದ ಆಸ್ಪತ್ರೆಯಲ್ಲಿ ಮೊದಲಬಾಗಿಗೆ ಸಂಜೆ 8.20 ಗಂಟೆಗೆ ದಿ.20.05.2020 ರಂದು ಪರಿಕ್ಷಿಸಲಾಯಿತು. ತಪಾಸಣೆ ಮಾಡಲಾಗಿ ಎಡಗೈ ಮೊಳಕೈಗೆ ನೋವು, ಭುಜದಲ್ಲಿ ನೋವು ಇರುವುದು ತಿಳಿಸಿರುತ್ತಾರೆ. ಅವರನ್ನು ಹೆಚ್ಚಿನ ತಪಾಸಣೆಗಾಗಿ ಜಿಲ್ಲಾ ಆಸ್ಪತ್ರೆ ಕಲಬುರಗಿಗೆ ಕಳುಹಿಸಲಾಗಿ ಅಲ್ಲಿ ನೀಡಿದ ಎಕ್ಸರೆ ಆಧಾರದ ಮೇಲೆ ಯಾವುದೇ ಫ್ಯಾಕ್ಚರ ಕಂಡು ಬಂದಿರುವುದಿಲ್ಲ ನನ್ನ ಪ್ರಕಾರ ಸದರಿ ಗಾಯಗಳು ಸಾದಾ ಸ್ವರೂಪದ ಗಾಯ ಎಂದು ಕಂಡು ಬಂದಿತು. ಅದರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

ಸಾಕ್ಷಿಗೆ ಈಗ ಚಾಸಾ-1 ರವರ ವೈದ್ಯಕೀಯ ಪ್ರಮಾಣ ಪತ್ರ ತೋರಿಸಿ ಅದನ್ನು ಗುರುತಿಸಿದ್ದು ವೈದ್ಯಕೀಯ ಪ್ರಮಾಣ ಪತ್ರವನ್ನು ನಿಪಿ-4, ಅದರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ.ಎಸ.ಸಿ. ವಕೀಲರರಿಂದ.**

ಹೊಡೆದಾಟದ ಹಿನ್ನಲೆಯಲ್ಲಿ ಗಾಯಾಳು ಆಸ್ಪತ್ರೆಗೆ ಬಂದರೆ ನಮ್ಮಮೊದಲ ಕರ್ತವ್ಯ ಪೋಲಿಸರಿಗೆ ಮಾಹಿತಿ ನೀಡುವುದು ಎಂದರೆ ಸರಿ. ನಾನು ಚಾಸಾ-1 ರವರು ಬಂದಾಗ ಸಂಬಂಧಪಟ್ಟ ಪೋಲಿಸರಿಗೆ ಮಾಹಿತಿ ನೀಡಿರುತ್ತೇನೆ. ನಾವು ಪೋಲಿಸರಿಗೆ ಮಾಹಿತಿ ನೀಡಿದ ನಂತರ ಎಂಎಲಸಿ ಕ್ರಮ ಸಂಖ್ಯೆ ನೀಡುತ್ತೇವೆ. ನಿಪಿ-4 ರಲ್ಲಿ ಸದರಿ ಕ್ರಮಸಂಖ್ಯೆ ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ-4 ರಲ್ಲಿ ಚಾಸಾ-1 ರವರ ಗಂಡನ ಹೆಸರನ್ನು ನಮೂದಿಸಿರುವುದಿಲ್ಲ. ನಿಪಿ-4 ರಲ್ಲಿ ಹಲವು ತಿದ್ದುಪಡಿಗಳಾಗಿದ್ದು ತಿದ್ದುಪಡಿಗಳಾದ ನಂತರ ನಾನು ಅದರ ಮೇಲೆ ಸರಿ ಮಾಡಿರುವುದಿಲ್ಲ. ನಾನು ಚಾಸಾ-1 ರವರು ಹೇಳಿದ ನಂತರವೇ ಕ್ವಾರಂಟೈನ ಡ್ಯೂಟಯಲ್ಲಿದ್ದಾಗ ಹೊಡೆದಾಟ ಆಗಿದೆ ಎಂದು ನಮೂದಿಸಿರುತ್ತೇನೆ. ನಾನು ನಿಪಿ-4 ರಲ್ಲಿ 2 ಗುರುತಿನ ಚಿನ್ನೆಗಳನ್ನು ನಮೂದಿಸಿರುವುದಿಲ್ಲ. ಗುರುತಿನ ಚಿನಸ್ನಿಗಳು ಇಲ್ಲದೇ ರೋಗಿಯನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಹೆಬ್ಬರಳಿನ ಗುರುತು ಪಡೆದಿರುತ್ತೇವೆ.

ಹೆಬ್ಬೆರಳಿನ ಗುರುತಿನ ಬಗ್ಗೆ ಪ್ರತಿಯನ್ನು ಪೋಲಿಸರಿಗೆ ಅವರು ಕೇಳದೇ ಇರುವ ಕಾರಣ ನೀಡಿರುವುದಿಲ್ಲ. ಎರಡು ಗುರುತಿನ ಚಿನ್ಹೆಗಳು ಗುರುತಿಸುವುದು ಕಡ್ಡಾಯ ಎಂದರೆ ಸರಿ. ಗುರುತಿನ ಚಿನ್ಹೆಗಳು ಇಲ್ಲದೇ ಗಾಯದ ಪ್ರಮಾಣ ಪತ್ರ ಅದು ಪೂರ್ಣಗೊಳ್ಳುವುದಿಲ್ಲ ಎಂದರೆ ಸರಿ. ಚಾಸಾ-1 ರವರು ಹೇಳಿದ ನಂತರವೇ ನೋವು ಇರುವುದು ಗೊತ್ತಾಗಿರುತ್ತದೆ ಎಂರದೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾವು ತಪಾಸಣೆ ಮಾಡಿದಾಗ ಬಾವು ಕಂಡು ಬಂದಿರುತ್ತದೆ ಆದ ಕಾರಣ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿರುತ್ತೇವೆ ಎಂದು ಹೇಳುತ್ತಾರೆ. ಚಾಸಾ-1 ರವರು ನೋವು ಇದೆ ಎಂದು ಹೇಳಿದ ಭಾಗಕ್ಕೆ ಮಾತ್ರ ತಪಾಸಣೆ ಮಾಡಿರುತ್ತೇವೆ ಎಂದರೆ ಸರಿ. ನಾನವು 15-20 ನಿಮಿಷ ತಪಾಸಣೆ ಮಾಡಿರುತ್ತೇನೆ. ನಿಪಿ-4 ರಲ್ಲಿ ಚಾಸಾ-1 ರವರನ್ನು ಜಿಲ್ಲಾ ಆಸ್ಪತ್ರೆ ಕಲಬುರಗಿಗೆ ಕಳುಹಿಸಿದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಮಗೆ ಎಕ್ಸರೇ ವರದಿಯನ್ನು ಪೊಲಿಸರು ತಂದು ನೀಡಿರುತ್ತಾರೆ. ನಿಪಿ-4 ರಲ್ಲಿ ಯಾವ ಪೋಲಿಸರು ತಂದು ನೀಡಿದರು ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ನಾವು ಎಕ್ಸರೇ ವರದಿಯನ್ನು ನಿಪಿ-4 ರೊಂದಿಗೆ ಲಗತ್ತಿಸಿರುವುದಿಲ್ಲ. ನನಗೆ ಎಕ್ಸರೇ ನೀಡಿರುವುದಿಲ್ಲ ಕೇವಲ ವರದಿಯನ್ನು ತಂದು ನೀಡಿದ್ದರು. ಗಾಯದ ಅವಧಿ ನಮೂದು ಇರುವುದಿಲ್ಲ ಎಂದರೆ ಗಾಯದ ಅವಧಿಯನ್ನು ಬಾಹ್ಯ ಗಾಯವಾದರೇ ಮಾತ್ರ ನಮೂದಿಸುತ್ತೇವೆ ಒಳನೋವಿಗೆ ನಮೂದಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ. ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ವೈದ್ಯಕೀಯ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಒಂದು ಗಟ್ಟಿಯಾದ ವಸ್ತುಜವಿನ ಮೇಲೆ ಬಿದ್ದರೂ ನಿಪಿ-4 ರಲ್ಲಿ ಹೇಳಿದಂತಹ ಗಾಯಗಳು ಆಗಬಹುದು ಎಂದರೆ ಸರಿ.

**ಮರುವಿಚಾರಣೆ:-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಪ.ಸಿ. ಆಳಂದ.